ಹೂಂ ಅನ್ನುತ್ತಿದ್ದೆ. ಈಗ ಸಾಧ್ಯವಿಲ್ಲ ಅನ್ನದೆ ಉಪಾಯವಿಲ್ಲ'' ಅಂದಳು ಅಕ್ಕ.

ಅಲ್ಲಿಂದ ಮೂರ್ತಿ ಮೂರು ಕಿಮೀ ದೂರದ ಅಣ್ಣನಲ್ಲಿಗೆ ಹೋದರು. ''ಇದು ಸಮಸ್ಯೆ ಸಮಸ್ಯೆಯೇ. ಏನು ಮಾಡೋಣ... ನನಗೂ ಇವಳಿಗೂ ನಮ್ಮ ನಿತ್ಯಕೆಲಸ ಮುಗಿಯುವುದರಲ್ಲಿಯೇ ಸಾಕಾಗಿ ಹೋಗುತ್ತದೆ. ವಯಸ್ಸಾಗಿದೆ, ಬೆಳಗ್ಗೆ ಹೋಗಿ ಹಾಲು ತರುವ ಕಷ್ಟ ತಪ್ಪಿಸಲು ಈಗ ಕಟ್ಟಂಚಾಯ ಕುಡಿಯುವುದು ನಾವು. ತಿಂಗಳ ಕಟ್ಲೆರಿ ಸಾಮಾನು ಹೇಗೂ ನೀನೇ ತಂದು ಹಾಕುವುದು ತಾನೇ. ಯಾವ ಧೈರ್ಯದಲ್ಲಿ ಇಲ್ಲಿ ತಂದು ಕಟ್ಟು, ನಾವು ನೋಡಿಕೊಳ್ಳುತ್ತೇವೆ ಅನ್ನುವುದು ನಾನು? ನಾನೊಂದು ಉಪಾಯ ಹೇಳ್ತೇನೆ. ಎರಡು ಮೂರು ಸಾವಿರ ಕಡಿಮೆಯಾದ್ರೂ ಚಿಂತಿಲ್ಲ, ಮಾರಿಬಿಡು. ಮತ್ತೆ ಬೇಕಿದ್ರೆ ಹಿಂದೆ ಬಂದಮೇಲೆ ಬೇರೆ ಖರೀದಿಸಿದರಾಯಿತು...'' ಅಂದರು ಅಣ್ಣ.

''ಕೂಡ್ಲೆ ಕೊಳ್ಳುವವರು ಬೇಕಲ್ಲಣ್ಣ, ನೋಡೋಣ, ಅದೂ ಒಂದು ದಾರಿ ಹೌದು'' ಎಂದು ಹೇಳುತ್ತ ಅಲ್ಲಿಂದ ಹೊರಟು ಬಂದರು ಮೂರ್ತಿ.

ಬರುವಾಗ ದಾರಿಯಲ್ಲಿ ಕೃಷಿಕ ಗೆಳೆಯ ರಂಗ ಸಿಕ್ಕಿದ. ನಿಯತ್ತಿನ ಮನುಷ್ಯ. ಮೂರ್ತಿಯವರಿಗೆ ಈತನಲ್ಲಿಯೂ ಕೇಳಿಬಿಡೋಣ ಅನ್ನಿಸಿತು. ಬೈಹುಲ್ಲು ಹಿಂಡಿಯ ಖರ್ಚಿನ ಮೇಲೆ ವಾರಕ್ಕೆ ಇನ್ನೂರು ರುಪಾಯಿಯ ಹಾಗೆ ಕೊಡುವ ಅಮಿಷವೊಡ್ಡಿದರು. ''ನೀವು ಹೇಳುವುದೆಲ್ಲ ಸರಿ. ಆದರೆ ಸ್ವಲ್ಪ ಆಲೋಚನೆ ಮಾಡಿ. ಕಳೆದ ಎರಡು ವರ್ಷಗಳಲ್ಲಿ ನಮ್ಮ ಕೇರಿಯಿಂದ ಆರು ಹಸುಗಳು ಕಾಣೆಯಾಗಿವೆ. ನಾನು ಯಾವ ಧೈರ್ಯದಲ್ಲಿ ಒಪ್ಪಿಕೊಳ್ಳಲಿ ಹೇಳಿ, ನಾಳೆ ನಿಮ್ಮ ಹಸುವನ್ನು ಕದ್ದುಕೊಂಡು ಹೋದರೆನ್ನಿ. ನಾನು ಹೇಗೆ ನಿಮಗೆ ಮುಖ ತೋರಿಸುವುದು? ಊರವರು ಏನು ಹೇಳಿಯಾರು? ಮಾರಿ ತಿಂದಿದ್ದಾನೆ ಎಂದಾರು'' ಎಂದು ತನ್ನ ಅಸಹಾಯಕತೆ ವಿವರಿಸಿದ ಆತ, ''ಹಸುವಿಗೆ ಬೇರೆ ದಾರಿ ಹುಡುಕಿ. ಹಾಲು ಕರೆಯಲು ಬೇಡದಿದ್ರೆ ಕರುವನ್ನು ನಮ್ಮಲ್ಲಿ ತಂದು ಬಿಡಿ'' ಎಂದೂ ಸೇರಿಸಿದ.

ಗಿರಿಯನೊಂದಿಗೆ ಮೂರ್ತಿ ಊರೆಲ್ಲ ಸುತ್ತಿದರೂ ಪ್ರಯೋಜನವಾಗಲಿಲ್ಲ. ''ಇನ್ನು ಖರೀದಿಯ ಆಯ್ಕೆ ಕೂಡ ಕೊಡೋಣ'' ಎಂದರು ಗಿರಿಯನಲ್ಲಿ. ಮಾರಿದರೆ ಅಮ್ಮ ಕಿರಿಕಿರಿ ಮಾಡುತ್ತಾರೆ ಎಂದ ಗಿರಿಯ. ''ನನಗೂ ಮನಸ್ಸಿಲ್ಲ, ಆದರೆ ಅಣ್ಣ ಸೂಚಿಸಿದ ಹಾಗೆ ಅದೂ ಒಂದು ಮಾರ್ಗ. ನಾಳೆ ನೋಡೋಣ'' ಅಂದರು ಮೂರ್ತಿ.

ರಾತ್ರಿ ಮನೆ ಸೇರಿದಾಗ ''ನನ್ನ ಕುಂದಾಪುರದ ತಂಗಿ ದನ ನಮ್ಮಲ್ಲಿ ತಂದು ಕಟ್ಟಿ. ನೀವು ಹೋಗಿ ಬನ್ನಿ ಅಂದಿದ್ದಾಳೆ'' ಅಂದರು ಮಡದಿ ಪರಿಹಾರ ಸಿಕ್ಕಿದ ಉತ್ಸಾಹದಲ್ಲಿ.

''ಎರಡು ಸಾವಿರ ಟೆಂಪೋ ಬಾಡಿಗೆಯಾದೀತು. ಪುನಃ ಬಂದ ಮೇಲೆ ಹಿಂದೆ ತರಬೇಕಲ್ಲ, ಒಟ್ಟು ನಾಲ್ಕು ಸಾವಿರ. ಅದಕ್ಕಿಂತ ಯಾರಿಗಾದರೂ ಮಾರಿ ಬಿಡೋಣ'' ಅಂದರು ಮೂರ್ತಿ. ''ನಮ್ಮ ಮನೆಯಲ್ಲೇ ಬೆಳೆದ ದನ. ಮಾರಿದರೆ ಮತ್ತೆ ಅಂತಹ ಸಾಧು ದನ ಎಲ್ಲಿ ಸಿಗುತ್ತದೆ?'' ಹಲುಬಿದರು ಗೌರಿಯಮ್ಮ.

''ಇನ್ನು ಹೆಚ್ಚು ಸಮಯವಿಲ್ಲ, ಬೇರೇನೂ ದಾರಿ ಇಲ್ಲದಿದ್ದರೆ ಮತ್ತೇನು ಮಾಡುವುದು?'' ಅಂದರು ಮೂರ್ತಿ.

''ನಾಲ್ಕು ಸಾವಿರ ಹೋದರೆ ಹೋಗಲಿ, ಕುಂದಾಪುರದಲ್ಲಿ ಕಟ್ಟಿ ಬನ್ನಿ'' ಗೌರಿಯಮ್ಮ ನಿರ್ಧಾರದ ಮಾತು ನುಡಿದರು.

ದನವನ್ನು ಕುಂದಾಪುರಕ್ಕೆ ಸಾಗಿಸುವ ನಿರ್ಧಾರದೊಂದಿಗೆ ಮೂರ್ತಿ ಮರುದಿನ ಟೆಂಪೊ ಡ್ರೈವರ್ ಅಬ್ದುಲ್ಲನ ಮನೆಗೆ ಹೋದರು. ಆತ ಅದಾಗಲೇ ಹೊರಟು ಹೋಗಿಯಾಗಿತ್ತು. ಅಲ್ಲಿಂದ ಟೆಂಪೊ ಹುಡುಕುತ್ತ ಪಾರ್ಕಿಂಗ್ ಯಾರ್ಡಿಗೆ ಬಂದರು. ''ದನವನ್ನಾ? ಕುಂದಾಪುರಕ್ಕಾ? ಅರುವತ್ತು ಮೈಲು.